# ಅನುಬಂಧ ಭಾಗ

# ಕರ್ತನ ಸಭೆಗೆ ಸದಸ್ಯರಾಗುವದು ಹೇಗೆ

ಪ್ರಶ್ನೆ. ಮೊದಲ ಶತಮಾನದ ಜನರು ಕರ್ತನ ಸಭೆಗೆ ಹೇಗೆ ಸದಸ್ಯರಾದರು, ಈ ದಿನಗಳಲ್ಲಿನ ಸಭೆಗಳಿಗೆ, ಹೇಗೆ ಸದಸ್ಯರುಗಳಾಗ ಬಹುದು?

ಉತ್ತರ. ಕ್ರಿಸ್ತನ ರಕ್ತದಿಂದ ರಕ್ಷಿಸಲ್ಪಟ್ಟವರೆಲ್ಲರೂ ಸಭೆಯು ದೇಹವಾಗಿದ್ದಾರೆ. ಪಾಪಿಗಳಾದವರು, ಕಳೆದು ಹೋದವರು ದೇವರ ಕೃಪೆಯನ್ನು ಪಡಕೊಂಡವರು ಇದರಲ್ಲಿ ಒಳಗೊಂಡಿರುವರು ಚಿಕ್ಕ ಮಕ್ಕಳು ಈಗಾಗಲೇ ಕ್ಷೇಮವಾಗಿದ್ದಾರೆ (ಮತ್ತಾಯ 18:3) ಆದರೆ ಯಾವಾಗ ತಾವು ಬೆಳೆದು ದೊಡ್ಡವರಾಗಿ, ತಾವು ಪಾಪಿಗಳೆಂದು ತಮಗೆ ಅರಿವು ಉಂಟಾಗು ವಾಗ (ರೋಮಾಪುರ 3:23) ರಕ್ಷಣೆಯ ಅಗತ್ಯವಿರುತ್ತದೆ. ಪಾಪಿಗಳನ್ನು ರಕ್ಷಿಸುವದಕ್ಕಾಗಿ ಕ್ರಿಸ್ತನು ಸತ್ತನು (1 ಕೊರಿಂಥ 15:3), ಕ್ರಿಸ್ತನು ಮಾಡಿರುವ ಈ ಕಾರ್ಯವನ್ನು ಹೊಂದಿ ಕೊಳ್ಳಲು ಏನು ಮಾಡಬೇಕು? ಅವನು ಮೊಲನೆಯದಾಗಿ ಕ್ರಿಸ್ತನನ್ನು ಅರಿಯಬೇಕು (ಯೋಹಾನ 6:45; ಮತ್ತಾಯ 28:18-20). ಇದು ಅವನ ಹೃದಯದಲ್ಲಿ ನಂಬಿಕೆಯನ್ನು ಉಂಟುಮಾಡುತ್ತದೆ (ರೋಮಾಪುರ 10:17). ಕ್ರಿಸ್ತನಲ್ಲಿ ಭರವಸವಿಡುವದರಿಂದ, ಯೇಸುವನ್ನು ಕರ್ತನೆಂದು ಇತರರ ಮುಂದೆ ಒಪ್ಪಿಕೊಳ್ಳಬೇಕು (ರೋಮಾಪುರ 10:9, 10). ಈ ನಂಬಿಕೆಯು ಮಾನಸಾಂತರವನ್ನು ಹುಟ್ಟಿಸುತ್ತದೆ (ಅಪೊಸ್ತಲರ ಕೃತ್ಯಗಳು 2:37, 38). ಮತ್ತು ಅದು ಅವನನ್ನು ದೀಕ್ಷಾಸ್ನಾನಕ್ಕೆ ನಡೆಸುತ್ತದೆ (ಮಾರ್ಕ 16:16), ಅದು ನೀರಿನ ಲ್ಲಾಗುವ ಸಮಾಧಿ (ರೋಮಾಪುರ 6:3, 4) (ಅಪೊಸ್ತಲರ ಕೃತ್ಯಗಳು 10:47). ಇದನ್ನು ಮಾಡಿದವರೆಲ್ಲರೂ, ಆದಿ ಸಭೆಗೆ ಕರ್ತನಿಂದ ನಡೆಸಲ್ಪಟ್ಟರು (ಅಪೊಸ್ತಲರ ಕೃತ್ಯಗಳು 2:38, 41, 47). 1 ಕೊರಿಂಥ 12:13ರಲ್ಲಿ ಆತ್ಮನ ಉಪದೇಶಕ್ಕೆ ಒಳಗಾದವರು "ಒಂದೇ ದೇಹಕ್ಕೆ ಸೇರಿಸಲ್ಪಡುವದಕ್ಕಾಗಿ ದೀಕ್ಷಾಸ್ನಾನ ಹೊಂದಿದರು ಎಂದು ಪೌಲನು ಒತ್ತಿ ಹೇಳಿರುವನು, ಅದು ಕರ್ತನ ಸಭೆಯಾಗಿದೆ" (ಕೊಲೊಸ್ಸೆ 1:18). ಸಭೆಯು ರಕ್ಷಿಸಲ್ಪಟ್ಟಿರುವವರ ದೇಹ ವಾಗಿರುವದರಿಂದ, ಒಬ್ಬನು ಅದಕ್ಕೆ ಸದಸ್ಯನಾದರೆ, ಆ ಸಭೆಯ ಅವನನ್ನು ರಕ್ಷಿಸುತ್ತದೆ, ಅದರಿಂದಲೇ ಅವನು ಸಭೆಗೂ ಸದಸ್ಯನಾಗುವನು!



9 ರೋಮಾ
ಮೂರು ವಿಶ್ರಾಂತಿ ಗೃಹಗಳು
8 ಅಪ್ಪಿಸಿಯಾ ಮಾರುಕಟ್ಟೆ
7 ಪೊತಿಯೋಲ
ಮಕೆದೋನ್ಯ
ಕಪ್ಪು ಸಮುದ್ರ
ಥೆಸಲೊನೀಕ
ಇತಾಲ್ಯ
ಅದ್ರಿಮಿತಿ
ಏಗಿಯನ್ ಸಮುದ್ರ
ಸಿಸಿಲಿ
ರೇಗಿಯಮ್
ಅಖಾಯ
ಕಿಲಿಕ್ಯ
ಅಸ್ಯ
ಅಡ್ರಿಯಾಟಿಕ್ ಸಮುದ್ರ
ಸುರಕೂಸು
ಪಂಪುಲ್ಯ
ಲುಕ್ಯ
ತಾರ್ಸ
ಮುರಾ
ಕ್ರಿಡಸ್
6 ಮಲ್ತಾ
ಅಂತಿಯೋಕ್ಯ
ಫೊಯಿನಿಕ್ಸ್
ಕ್ರೇತ
ಸಲ್ಮೋನೆ
ಸಿರಿಯ
ಕುಪ್ರ
ಕೌದ್ಯ
4 ಲಸಾಯ
5 ಚಂದರೇವು
3 ಸಿದೋನ್
2 ಕೈಸರೆಯ
ಮೆಡಿಟೇರಿಯನ್ ಸಮುದ್ರ
1 ಯೆರೂಸಲೇಮ
ಕ್ರೇನೆ
ಸಿರ್ತಿಸ್‌ನ ಕಿರು ನೀರು
ಅಲೆಗ್ಸಾಂಡ್ರಿಯಾ

# ಪೌಲನ ರೋಮಾಪುರದ ಪ್ರಯಾಣ

ಯೆಹೂದ್ಯ ದಂಗೆ ಕೋರರಿಂದ, ರೋಮಾಯ ಸಿಪಾಯಿಗಳು ಅವನನ್ನು ಪಾರು ಮಾಡಿದರು (ಅಪೊಸ್ತಲರ ಕೃತ್ಯಗಳು 21), ಪೌಲನು ಬಂಧಿತನಾನು ❶ ಯೆರೂಸಲೇಮಿನಿಂದ ❷ ಕೈಸರೆಯಕ್ಕೆ ಫೇಲಿಕ್ಸನು ಅವನ ಪಿರ್ಯಾದಿಯನ್ನು ಕೇಳಿದರೂ, ಅದರ ಬಗ್ಗೆ ನ್ಯಾಯ ನೀಡಲಿಲ್ಲ (ಅಪೊಸ್ತಲರ ಕೃತ್ಗಳು 24). ಫೇಲಿಕ್ಸನ ನಂತರ ಬಂದ ಫೆಸ್ತನ ಬಳಿಯಲ್ಲಿ ಎರಡು ವರ್ಷಗಳ ನಂತರ ತನ್ನ ಪಿರ್ಯಾದನ್ನು ಸಲ್ಲಿಸಿದನು (25:1-10). ಫೆಸ್ತನು, ಪೌಲನನ್ನು ಯೆಹೂದ್ಯರಿಗೆ ಒಪ್ಪಿಸುವಾಗ, ಪೌಲನು ಕೈಸರನಲ್ಲಿ ಮನವಿ ಮಾಡುವೆನು ಅಂದನು (25:11). ಅವನು ರೋಮಾಯಕ್ಕೆ ಹೋಲು ಕಾಯುತ್ತಿರುವಾಗ, ಅಗ್ರಿಪ್ಪ II ನ ಸಂಗಡ ಅವನು ಕ್ರಿಸ್ತನ ಖಾದಿ ಎಂದು ಮಾತನಾಡಿದನು (ಅಪೊಸ್ತಲರ ಕೃತ್ಯಗಳು 26).

❸ ಸೀದೋನಿನಿಂದ, ಪೌಲ ಹಾಗು (ಲೂಕ) ಸಂಗಡಿಗರು ರೋಮಾಯಕ್ಕೆ ಹೊರಟರು, ಅವರ ಸಂಗಡ ಸಿಪಾಯಿಗಳು ಇದ್ದರು (27:1-3). ಲುಸ್ಯದ ಮುರದಲ್ಲಿ ಹಡಗನ್ನು ಬದಲಾಯಿಸಿದರು (27:5, 6). ಕೆಟ್ಟ ಹವಾಮಾನದ ನಿಮಿತ್ತ ಅವರು ❹ ಕ್ರೇತದ ಚಂದರೇವಿಗೆ ಹೋದರು, ಅಲ್ಲಿ ಸೆಪ್ಟೆಂಬರ್ ತಿಂಗಳುವರೆಗೆ ನಾವಿಕರು ವಿಶ್ರಾಂತಿ ಪಡೆದರು - ಮತ್ತು ಪುನಃ ಪ್ರಯಾಣಮಾಡುವವರೆಗೆ ಅಲ್ಲಿದ್ದರು. ಚಳಿಗಾಲವನ್ನು ಕಳೆಲು, ಕ್ಲೌದ್ಯಕ್ಕೆ ಹೋದರು (27:16); ಆದರೆ ಅವರು ಸಮುದ್ರದ ಆಚೆಗೆ ಎಸೆಲ್ಪಟ್ಟರು (27:17). ❺ ಅವರು ಆಹಾರ ಸರಂಜಾಮುಗಳನ್ನು ಸಮುದ್ರಕ್ಕೆ ಎಸೆದ ನಂತರ ಅದು ❻ ಮೆಲೀತೆಯ (27:41). ಕಳ್ಳುಸುಬಿನಲ್ಲಿ ಸಿಲಿಕಿಕೊಂಡಿತು. ಹಡಗು ನಾಶವಾದದ್ದೂ, ಹಡಗಿನವರು ರಕ್ಷಿಸಲ್ಪಟ್ಟಿದ್ದರು (27:44). ಮೆಲೀತೆಯಲ್ಲಿ ಪೌಲನು ಹಾವಿನಿಂದ ಪಾರಾದನು (28:3-5) ಮುಂದಿನ ಮೂರು ತಿಂಗಳು ಸ್ವಸ್ಥತೆ ಸೇವೆಯನ್ನು ಮಾಡಿದರು (28:8-11). ಉತ್ತಮ ಹವಮಾನದಲ್ಲಿ ಅವರು ಕೂಸಿಗೆ ಹೋದರು (28:12). ಮೂರು ದಿನದ ಪ್ರಯಾಣದ ನಂತರ ರೇಗಿಮಿಗೂ ಹಾಗೂ, ❼ ಪುತೋಲಿಗೂ ಬಂದರು, ಅದು ರೋಮಾ ಸಾಮ್ರಾಜ್ಯದ ಪ್ರಮುಖ ರೇವು ಪಟ್ಟಣವಾಗಿತ್ತು. ಪೌಲ ಮತ್ತು ಸಂಗಡಿಗರು ಸ್ಥಳೀಯ ಕ್ರೈಸ್ತರಲ್ಲಿ ಅತಿಥಿ ಸತ್ಕಾರ ಹೊಂದಿದರು. ನಂತರ ಅವರು 100 ಮೈಲು ಅಂತರದಲ್ಲಿದ್ದ ರೋಮಾಪುರಕ್ಕೆ ಪ್ರಯಾಣಿಸಿದರು. ❽ ಮಾರ್ಗ ಮಧ್ಯದ ಸ್ವಾಗತವು ಪೌಲನಿಗೆ ಪ್ರೋತ್ಸಾಹ ನೀಡಿತ್ತು. ❾ ರೋಮಾಯದಲ್ಲಿ ಪೌಲನು ಒಬ್ಬ ಸಿಪಾಯಿಯೊಂದಿಗೆ ಬಂಧಿಸಲ್ಪಟ್ಟು ಎರಡು ವರ್ಷಗಳ ಕಾಲ ಬಾಡಿಗೆ ಮನೆಯಲ್ಲಿದ್ದನು, ಆ ಸಮಯದಲ್ಲಿ ಅನೇಕ ಜನರನ್ನು ಸ್ವಾಗತಿಸುವ ಸ್ವತಂತ್ರವನ್ನು ಪಡೆದಿದ್ದನು (28:30, 31).

# ಪೌಲನ ಜೀವಿತದ ಕಾಲಾನುಸಾರವಾದ ಸಲಹೆಗಳು

| ದಿನಾಂಕ | ಘಟನೆ | ಅಪೊಸ್ತಲ ಕೃತ್ಯಗಳ ದಾಖಲ |
|---|---|---|
| ಕ್ರಿ.ಶ. 1 (?) | ಜನನ | - |
| 34 | ಪರಿವರ್ತನೆ | 9 |
| 46-48 | ಮೊದಲ ಸೇವಾ ಪ್ರಯಾಣ | 13-14 |
| 49 | ಯೆರೂಸಲೇಮಿನ ಸಮ್ಮೇಳನ | 15 |
| 49-52 | ಎರಡನೇ ಸೇವಾ ಪ್ರಯಾಣ | 16-18 |
| 53-57 | ಮೂರನೇ ಸೇವಾ ಪ್ರಯಾಣ | 19-21 |
| 57 | ಯೆರೂಸಲೇಮಿನಲ್ಲಿ ಬಂಧನ | 21-22 |
| 57-60 | ಕೈಸರೈಯ ಸೆರೆಮನೆಯಲ್ಲಿ ಬಂಧನ | 23-26 |
| 60 | ರೋಮಾಯಕ್ಕೆ ಪ್ರಯಾಣ | 27-28 |
| 61-63 | ರೋಮಾಯದಲ್ಲಿನ ಪ್ರಥಮ ಬಂಧನ | 28 |
| 66-67 | ರೋಮಾಯದಲ್ಲಿನ ಎರಡನೆ ಬಂಧನ | - |
| 67 | ಮರಣ | - |